ಒಂದಕ್ಕೆ ಪ್ರಸ್ತಾವನೆಯನ್ನು ಕಳಿಸುತ್ತಾರೆ. ಆದುದರಿಂದ ತಮ್ಮ ಮೂಲಕ ಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ ಆಯಾಯ ಜಿಲ್ಲೆಗೆ ಈ 30-50-100 ಹಾಸಿಗೆಯುಳ್ಳ ಪ್ರಾಥಮಿಕ ಕೇಂದ್ರಗಳಿವೆ, ಹೆಚ್ಚಿನ ಹಣವನ್ನು ಒದಗಿಸಿದರೆ ಬಹುಶಃ ಅವರು ಹೆಚ್ಚಿನ ಪ್ರಸ್ತಾವನೆಯನ್ನು ಕಳಿಸತಕ್ಕಂಥ ಕೆಲಸವಾಗುತ್ತದೆ. ಆದುದರಿಂದ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಹೆಚ್ಚಾಗಿ ಹಣವನ್ನು ಆಯಾಯ ಜಿಲ್ಲೆಗಳಿಗೆ, ಜಿಲ್ಲಾಪರಿಷತ್ತುಗಳಿಗೆ ಇದರ ಸಲುವಾಗಿ ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಉಪಾಧ್ಯಕ್ಷಿಣಿಯವರೇ, ಜಿಲ್ಲಾ ಪರಿಷತ್ತುಗಳಿಗೆ ಹಣವನ್ನು ಸ್ವೇಚ್ಛೆಯಾಗಿ ಕೊಡಲು ಬರುವುದಿಲ್ಲ. ಯೋಜನಾ ಇಲಾಖೆಯವರೆ ಇಂಥ ಸಾಮೂಹಿಕ ಆಸ್ಪತ್ರೆಗಳು ಏರಿಸುವುದಕ್ಕೆ ಎಲ್ಲೆಲ್ಲಿ ಆಗತ್ಯವಾಗಿ ಆಗಬೇಕಾಗಿದೆ, ಅದರ ನಿಯಮಗಳೇನು, ನಮ್ಮ ಆರ್ಥಿಕ ಇತಿಮಿತಿಯೊಳಗೆ ನಮ್ಮ ರಾಜ್ಯದಲ್ಲಿ ಎಷ್ಟು ಇಂಥ ಆಸ್ಪತ್ರೆಗಳನ್ನು ಮಾಡಬೇಕು, ಆಸ್ಪತ್ರೆಗಳ ಸಂಖ್ಯೆಯನ್ನು ಎಷ್ಟಕ್ಕೆ ಏರಿಸಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ಜಿಲ್ಲಾವಾರು ಯೋಜನೆಯನ್ನು ತಯಾರು ಮಾಡಿ ಇಂಥ ಜಿಲ್ಲೆಗೆ ಇಷ್ಟು ಹಣವನ್ನು ಕೊಡಬೇಕೆಂದು ಹೇಳುತ್ತಾರೆ ಆ ರೀತಿ ನಾವು ಮಾಡುತ್ತೇವೆ. ಅದು ನಮ್ಮ ಇಲಾಖೆಗೆ ಬರುವುದಿಲ್ಲ. ಅದು Dostrict Sector ನಲ್ಲಿ transfer ಆಗುತ್ತದೆ. ಆದುದರಿಂದ ನಾವು ಆಯಾಯ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ಅಲ್ಲಿಂದ ಪ್ರಸ್ತಾವನೆಯನ್ನು ತರಿಸಿಕೊಂಡು ಆ ಶಿಫಾರಸನ್ನು ಮಂಜೂರು ಮಾಡತಕ್ಕ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ವಿಷಯ:- ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗೆ ಸೇರ್ಪಡೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 373 (2018)

ಶ್ರೀ ವೈ. ನಾಗಪ್ಪ (ಹರಿಹರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳನ್ನು ಮಕ್ಕಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಳಪಡಿಸಲಾಗಿದೆ ; ಯಾವ ಯಾವ ವರ್ಷಗಳಿಂದ ಜಾರಿಯಾಗಿದೆ,

ಆ) ಹರಿಹರ ತಾಲ್ಲೂಕನ್ನು 1992-93ನೇ ಆರ್ಥಿಕ ಸಾಲಿನಲ್ಲಿಯೇ ಈ ಯೋಜನೆಯಡಿ ಸೇರ್ಪಡೆ ಮಾಡಲಾಗುವುದೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ 1991-92 ಒರಿಯೂರು 1982-83, ಹೊಸದುರ್ಗ 1983-84 ಚಳ್ಳಕೆರೆ 85-86 ಜಗಳೂರು 88-89 ಚಿತ್ರದುರ್ಗ 1988-89 ದಾವಣಗೆರೆ 1990-91 ಮತ್ತು ಮೊಳಕಾಲ್ಮೂರು 1991-92ಈ 8 ತಾಲ್ಲೂಕುಗಳನ್ನು ಅವುಗಳ ಮುಂದೆ ನಮೂದಿಸಿರುವ ವರ್ಷದಿಂದ ಮಕ್ಕಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಳಪಡಿಸಲಾಗಿದೆ.

ಆ) ಈ ಯೋಜನೆಯನ್ನು ಕೇಂದ್ರ ಸರ್ಕಾರ ಈ ತಾಲ್ಲೂಕಿಗೆ ಮಂಜೂರು ಮಾಡಿದಾಗ ಪ್ರಾರಂಭಿಸಲಾಗುವುದು.

ಡಾ. ವೈ. ನಾಗಪ್ಪ :- ಉಪಾಧ್ಯಕ್ಷಿಣಿಯವರೇ, ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಮ್ಮ ಮಂತ್ರಿಗಳು ಇಲ್ಲಿ ಇಲ್ಲ. ಈ ಒಂದು ಅಂಗನವಾಡಿ ಕೇಂದ್ರವನ್ನು ತೆರೆಯುವುದು It is a rational thing. ಸಮಗ್ರ ಗ್ರಾಮೀಣ ಅಭಿವೃದ್ಧಿ ಆಗಬೇಕಾದರೆ. ಕೇವಲ ರಸ್ತೆಗಳಲ್ಲ, ಸಾರಿಗೆ ಸೌಕರ್ಯವಲ್ಲ ಆಸ್ಪತ್ರೆಗಳಲ್ಲ , ಇವತ್ತು ಹಳ್ಳಿಗಾಡಿನಲ್ಲಿರತಕ್ಕ economically weaker sections, SC/STs, these children should come up in life. ಈ ಒಂದು ಅಂಗನಾವಾಡಿ ಕೇಂದ್ರವನ್ನು ತಮ್ಮ ದಾವಣಗೆರೆಯಲ್ಲಿ ಮಂಜೂರು ಮಾಡಿಸಿ ಕೊಂಡಿದ್ದೀರಿ ,ದಾವಣಗೆರೆಯಲ್ಲಿ ಎಲ್. ಕೆ .ಜಿ. ಮತ್ತು ಯು.ಕೆ.ಜಿ ಸ್ಕೂಲ್‌ಗಳು ಬೇಕಾದಷ್ಟಿವೆ. ಇದು ನಿಜವಾಗಿಯೂ ಹಳ್ಳಿಗಾಡಿನ ಜನರಿಗೆ ಬಹಳ ಉಪಯೋಗವಾಗತಕ್ಕ ಸಂಸ್ಥೆ

ಅದು ನನ್ನ ತಾಲ್ಲೂಕಿನಲ್ಲಿ ಆಗಿಲ್ಲ. ನನ್ನ ತಾಲ್ಲೂಕಿನಲ್ಲಿ ಹಿಂದುಳಿದ ಜನಾಂಗದವರು, ಅಲ್ಪಸಂಖ್ಯಾತರು ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಜಾತಿಯವರಿಕ್ಕಳು ಬಹಳ ಹೆಚ್ಚಾಗಿದ್ದಾರೆ. ಅದಕ್ಕೋಸ್ಕರ ಇದು ಬೇಗ ಆಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ):- ಉಪಾಧ್ಯಕ್ಷೀಣಿಯವರೇ, ಅದು ಮೊದಲನೆಯದಾಗಿ ಐ.ಸಿ.ಡಿ.ಎಸ್. ಕಾರ್ಯಕ್ರಮವಾಗಿ ಪ್ರಾರಂಭವಾದಾಗ ಪ್ರಮುಖವಾಗಿ ಪರಿಶಿಷ್ಟ ಜನಾಂಗ, ಪರಿಶಿಷ್ಟ ವರ್ಗದ ಜನಾಂಗ ಏನು ಇದೆ ಅದರ ಆಧಾರದ ಮೇಲೆ, ಮತ್ತು ಬರಗಾಲ ಪ್ರದೇಶ ಹಾಗೂ tribal areas ಮತ್ತು educationally, nutrionally backward areas ಪ್ರದೇಶಗಳನ್ನು ಹೊಂದಿಸಿಕೊಂಡು ಹೊಸ ಯೋಜನೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿತ್ತು. ಆದರೆ ಇತ್ತೀಚೆಗೆ criteria ಪ್ರಕಾರ ಈ ದೇಶದಲ್ಲಿರತಕ್ಕ below the poverty line people ಏನು ಇದ್ದಾರೆ ಅಂಥ ತಾಲ್ಲೂಕುಗಳನ್ನು ರಾಷ್ಟ್ರಮಟ್ಟದಲ್ಲಿ ಗುರ್ತಿಸಿ ಅವರಿಗೆ ಮಂಜೂರು ಮಾಡುತ್ತಿದ್ದೇವೆ. ಈಗಾಗಲೇ ಕರ್ನಾಟಕ ರಾಜ್ಯಕ್ಕೆ ಈ ಹಿಂದೆ 106 ತಾಲ್ಲೂಕುಗಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿದ್ದರೆ, ಇತ್ತೀಚೆಗೆ ಆರು ತಾಲ್ಲೂಕುಗಳನ್ನು ಮತ್ತು ಮೊನ್ನೆ ತಾನೆ ಪುನಃ ಆರು ತಾಲ್ಲೂಕುಗಳನ್ನು ಅಂದರೆ 118 ತಾಲ್ಲೂಕುಗಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿದ್ದಾರೆ. ಅದು ದೇಶದ ರಾಷ್ಟ್ರಮಟ್ಟದಲ್ಲಿ ಈ ಪಟ್ಟಿಯನ್ನು ಇಟ್ಟುಕೊಂಡು ಆ ಆಧಾರದ ಮೇಲೆ ಬಿಲೋ ದಿ ಪಾವರ್ಟಿ ಲೈನ್ ಜನ ಯಾವ ತಾಲ್ಲೂಕುಗಳಲ್ಲಿ ಹೆಚ್ಚು ಇದ್ದಾರೆ ಆ ಆದ್ಯತೆಯನ್ನು ಅನುಸರಿಸಿಕೊಂಡು ಅವರು ಮಂಜೂರು ಮಾಡುತ್ತಿದ್ದಾರೆ. ಬಹುಶಃ ರಾಜ್ಯ ಸರ್ಕಾರಕ್ಕೆ ಇಂತಹ ಪ್ರದೇಶಗಳನ್ನೇ ಸೇರಿಸಬೇಕು ಇಂತಹ ಪ್ರದೇಶಗಳನ್ನು ಬಿಡಬೇಕು ಎಂದು ಹೇಳುವ ಆ ಚಾಯ್ಸ್, ಆ ಆಯ್ಕೆ ಈಗ ರಾಜ್ಯಸರ್ಕಾರದಲ್ಲಿ ಇಲ್ಲ. the total number of population below the poverty line divided by the total population below the poverty line in the country. ಈ ಮಾರ್ಗದರ್ಶನದಲ್ಲಿ ಮಾಡುವುದರಿಂದ ಇದು ಆಗುತ್ತದೆಯೇ ಹೊರತು ತಮ್ಮ ತಾಲ್ಲೂಕು ಬೇರೆಯಾವುದೇ ತಾಲ್ಲೂಕು ಇರಲಿ, ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬರುವುದಿಲ್ಲ ನಮ್ಮ ತಾಲ್ಲೂಕು ಇಲ್ಲ. ನಮ್ಮ ತಾಲ್ಲೂಕು ಸ್ಟೇಟ್ ಸೆಕ್ಟಾರ್‌ನಲ್ಲಿ ಇದೆ, ಸ್ಟೇಟ್ ಸೆಕ್ಟಾರ್‌ನಲ್ಲಿ ಬರೀ 100 ಬಾಲವಾಡಿ ಮಾಡುವುದಕ್ಕೆ ಮಾತ್ರ ಸಾಧ್ಯವಿದೆ. ಆದರೆ ಕೇಂದ್ರದ ಯೋಜನೆಯಲ್ಲಿ 233 ತಾಲ್ಲೂಕುಗಳನ್ನು ಸೇರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಬಡತನ ರೇಖೆಯ ಒಳಗಡೆ ಇರತಕ್ಕಂತಹ ತಾಲ್ಲೂಕುಗಳನ್ನು ಅಲ್ಲಿ ಜನಸಂಖ್ಯೆಯನ್ನು ಹೊಂದಿ ಅವರು ವಿಂಗಡಣೆ ಮಾಡುತ್ತಾರೆ. ಮತ್ತು ಆಯ್ಕೆ ಮಾಡುತ್ತಾರೆ. ಅದರಲ್ಲಿ ಹೆಚ್ಚು ಆಯ್ಕೆಗೆ ಮಾಡುವಂಥಾದ್ದು ನಮ್ಮ ಕೈಯಲ್ಲಿ ಬಹುಶಃ ವಿಶೇಷವಾದಂತಹ discretinary ಪವರ್ಸ್ ಇಲ್ಲ.

ಡಾ. ವೈ. ನಾಗಪ್ಪ :- ಆಯಿತು ಸ್ವಾಮಿ ಈಗ ನಿಮ್ಮ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ, ನಿಮ್ಮ ದೃಷ್ಟಿಯಲ್ಲಿ ದಾವಣಗೆರೆಯಲ್ಲಿ ಯಾವ ಕ್ರೈಟೀರಿಯಾ ಮೇಲೆ ಕೇಂದ್ರ ಸರ್ಕಾರ ಕೊಟ್ಟಿದೆ, ತಮಗೆ ಗೊತ್ತಿದ್ದ ಹಾಗೆ ಬಿಲೋದ ಪಾವರ್ಟಿ ಒಂದು ಜನಸಂಖ್ಯೆ ತಾಲ್ಲೂಕು ಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಇದೆ. ಆ ಒಂದು ಕ್ರೈಟೀರಿಯಾ ತೆಗೆದುಕೊಂಡರೆ ಇದು ಹರಿಹರಕ್ಕೆ ಬಹಳ ಅವಶ್ಯಕತೆಯಾಗಿ ಆಗಬೇಕಿತ್ತು ಮತ್ತು ತಮ್ಮ ಈಗ 18 ತಾಲ್ಲೂಕು ಸೇರಿಸಿದ್ದೇವೆಂದು ಹೇಳಿದ್ದೀರಿ, ಅದರಲ್ಲಿ ಹರಿಹರ ತಾಲ್ಲೂಕು ಇದೆಯೋ ಇಲ್ಲವೋ ಅದು ನಮಗೆ ಬೇಕಾಗಿದೆ. ಅದಕ್ಕೆ ಉತ್ತರ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸಭಾಧ್ಯಕ್ಷೀಣಿಯವರೇ, 106 ತಾಲ್ಲೂಕುಗಳು ಒಂದೆ ಇತ್ತು. ಈ 106 ತಾಲ್ಲೂಕು ಇರುವಾಗ ಸ್ವಲ್ಪdiscretionary ಪವರ್ಸ್ ಇರಬಹುದಿತ್ತು. ಏಕೆಂದರೆ ಆ ಕ್ರೈಟೀರಿಯಾ drought prone area ಟ್ರೈಬಲ್ ಏರಿಯಾ ಮತ್ತು ಷೆಡ್ಯೂಲ್ ಕ್ಯಾಸ್ಟ್ ಪಾಪ್ಯುಲೇಷನ್ ಇದಲ್ಲಾ ಇರುವುದರಿಂದ ಸ್ವಲ್ಪ discretion ಗೆ ಅವಕಾಶವಿತ್ತು. ಆದರೆ ಈಗ ಒಂದೇ ಒಂದು ಕ್ರೈಟೀರಿಯಾ

ಬಿಲೋ ದಿ ಪಾವರ್ಟಿ ಲೈನ್ ಇದ್ದುದರಿಂದ ಇಡೀ ದೇಶದಲ್ಲಿ ತಾಲ್ಲೂಕುಗಳನ್ನು ಆ ಪಾಪ್ಯುಲೇಷನ್ ಬಿಲೋ ದಿ ಪಾವರ್ಟಿ ಲೈನ್ ಹಾಕಿ ಬಿಡುತ್ತಾರೆ. ಅದರ ಪ್ರಕಾರ ಮಾಡಿದ್ದಾರೆ. ಹಿಂದೆ 106 ತಾಲ್ಲೂಕು ಇತ್ತು, ಈಗ 12 ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಒಂದನೆಯ ಹಂತದ ಆರು ತಾಲ್ಲೂಕುಗಳಲ್ಲಿ ಹೊಸನಗರ, ಸಿಂಧನೂರು, ಎನ್. ಆರ್. ಪುರ, ಬಳ್ಳಾರಿ ರೂರಲ್, ಹಗರಿಬೊಮ್ಮನಹಳ್ಳಿ, ಶಿಗ್ಗಾಂವ್ ಸೇರಿದೆ. ಇನ್ನೊಂದು ಆರು ಹಿಂದೆ ಕೊಟ್ಟಿರುವುದರಲ್ಲಿ ರಾಯಚೂರು, ಗುಡಿಬಂಡೆ, ಶಿಕಾರಿಪುರ, ಕಲ್‌ಘಟಗಿ, ತೆರೀಕೆರೆ, ಶಿರಗುಪ್ಪ ಇದೆ. ಇದರಲ್ಲಿಯೂ ಕೂಡ ನಿಮ್ಮ ತಾಲ್ಲೂಕು ಇಲ್ಲ, ನನ್ನ ತಾಲ್ಲೂಕು ಇಲ್ಲ, ಏನು ಮಾಡುತ್ತೀರಿ.

ಶ್ರೀಮತಿ ಮೋಟಮ್ಮ :- ಸಿಟಿಗೆ ಪ್ರಾತಿನಿದ್ಯ ಕೊಟ್ಟಿದ್ದೀರಿ, ತಾಲ್ಲೂಕು ಅಂದರೆ ದಾವಣಗೆರೆಗೆ ಹೇಗೆ ಕೊಟ್ಟಿದ್ದೀರಿಂದು ಅವರು ಕೇಳಿದ್ದುದು.

ಉಪಾಧ್ಯಕ್ಷಿಣಿಯವರು:- ಅರ್ಬನ್ ಪ್ರಾಜೆಕ್ಟ್ಸ್ ಅಂತ ಬೇರೆಯೇ ಇತ್ತು That is a different category.

ಶ್ರೀಮತಿ ಮೋಟಮ್ಮ :- ಅದನ್ನು ಅವರು ಹೇಳಲಿಲ್ಲ, ದಾವಣಗೆರೆ ಸಿಟಿಗೆ ಯಾವ ಕ್ರೈಟೀರಿಯಾ ಮೇಲೆ ಕೊಟ್ಟಿದ್ದೀರಿ. ಹರಿಹರಕ್ಕೆ ಏಕೆ ಕೊಡಲಿಲ್ಲವೆಂದು ಅವರು ಕೇಳಿದರು.

ಡಾ. ವೈ. ನಾಗಪ್ಪ :- ಸಭಾಧ್ಯಕ್ಷಿಣಿಯವರೇ, ನನ್ನ ಮೂಲಭೂತ ಪ್ರಶ್ನೆಯೇನೆಂದರೆ ಯಾವ ಕ್ರೈಟೀರಿಯಾ ಮೇಲೆ ದಾವಣಗೆರೆಗೆ ಇದು ಸಿಕ್ಕಿತ್ತು. Dvanagere is a Cosmopolitan City.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಅದು ಈಗ ಪ್ರಶ್ನೆ ಏನೆಂದರೆ ಹರಿಹರ ತಾಲ್ಲೂಕು ಸೇರಿಸಬೇಕು, ದಾವಣಗೆರೆ ಈ ಆರು ಮತ್ತು ಮತ್ತೊಂದು ಪಟ್ಟಿಯಲ್ಲಿ ಇಲ್ಲ. ಅದು 106ರ ಪಟ್ಟಿಯಲ್ಲಿದೆ. 106 ರ ಪಟ್ಟಿಯಲ್ಲಿ ಆ ಎಲ್ಲಾ ಕ್ರೈಟೀರಿಯಾ ಮಾಡಿದ್ದೇವೆ. ಯಾವುದೇ ಈ drought prone area, ಷೆಡ್ಯೂಲ್ ಕ್ಯಾಸ್ಟ್ ಪಾಪ್ಯುಲೇಷನ್ ಟ್ರೈಬಲ್ ಏರಿಯಾ, ಎಜುಕೇಷನಲ್ಲಿ ಬ್ಯಾಕ್‌ವರ್ಡ್‌ನೆಸ್ ಆ ಕ್ರೈಟೀರಿಯಾದಲ್ಲಿ ದಾವಣಗೆರೆ ಸೇರಿದೆ. ಅದು ಏಕೆ ಸೇರಿದೆ ಎಲ್ಲಿ ಸೇರಿದೆ ಎಲ್ಲಿ ತಪ್ಪಾಗಿದೆ ಎನ್ನುವುದನ್ನು ಬೇಕಾದರೆ ಒಂದು ಸಂಶೋಧನೆ ಮಾಡೋಣ. ಹರಿಹರ ತಾಲ್ಲೂಕು ಮುಂದೆ ಬರತಕ್ಕಂತಹ ಆದ್ಯತೆಗಳ ಪಟ್ಟಿಯಲಿ ಎಲ್ಲಿ ಇದೆ ಅಂತ ಸ್ವಲ್ಪ ನೋಡೋಣ, ತಾವು ಏನು ಹೇಳುತ್ತಿದ್ದೀರಿ ಹರಿಹರ ತಾಲ್ಲೂಕು ಕೂಡ ಈಗ 12 ತಾಲ್ಲೂಕುಗಳಲ್ಲಿ ಸೇರಿದೆ. ಬಹುಶಃ ಹರಿಹರ ತಾಲ್ಲೂಕು ಹತ್ತಿರದಲ್ಲಿ ಇರಲಿಕ್ಕೆ ಸಾಕು, ನನ್ನ ಹತ್ತಿರ ಪಟ್ಟಿ ಇಲ್ಲ. ಅದು ರಾಷ್ಟ್ರ ಮಟ್ಟದಲ್ಲಿ ಒಂದು ಪಟ್ಟಿ ಮೇಂಟೇನ್ಸ್ ಮಾಡಿದ್ದಾರೆ. ನಾವು ಅದನ್ನು ಪರಿಶೀಲನೆ ಮಾಡೋಣ. ಆದರೆ ಇದರಲ್ಲಿ ನಾನು ಈಗಾಗಲೇ ಹೇಳಿದಂತೆ ಇಚ್ಛಾನುಸಾರವಾಗಿ ಈಗಂತೂ ಸೇರಿಸುವುದಕ್ಕೆ ಆಗುವುದಿಲ್ಲ. ಹಿಂದೆ ಬರಗಾಲ ಪ್ರದೇಶ ಅಂತ ಮಾಡಿದ್ದಾರೆ. There would have been some scope for some changes. ಆದರೆ ಇದು ಈಗ ರಾಷ್ಟ್ರಮಟ್ಟದಲ್ಲಿ ಇರುವುದರಿಂದ ನಮ್ಮ ಉದ್ದೇಶವೇನೆಂದರೆ ಎಲ್ಲಾ ತಾಲ್ಲೂಕುಗಳನ್ನು ಈ ನಕ್ಷೆಯಲ್ಲಿ ಸೇರಿಸಬೇಕೆಂಬ ಉದ್ದೇಶವಿದೆ. ಅದನ್ನು ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ, ಇನ್ನೊಂದು ಸಾರಿ ಬರೆದಾಗ ಪುನಃ ಅವರ ಆ ಬೇಡಿಕೆಯನ್ನು ಸಲ್ಲಿಸಿ ಹರಿಹರ ತಾಲ್ಲೂಕು ಕೂಡ ಈ ಆದ್ಯತೆಯಲ್ಲಿ ಬರಬೇಕೆಂದು ನಮ್ಮ ನಾಗಪ್ಪನವರು ಹೇಳುವ ಪ್ರಕಾರ ಬಿಲೋ ದಿ ಪಾವರ್ಟಿ ಲೈನ್ ಜಾಸ್ತಿ ಇದ್ದಾರೆ, ಅದರ ಅಂಕಿ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ನೀವು ಸೇರಿಸಿ ಮಾಡಿ ಎಂದು ನಾವು ಹೇಳುತ್ತೇವೆ.